ಬೋಳಿಸಿಕೊಳ್ಳುತ್ತಿದ್ದ. ಈಗ ನುಣ್ಣಗಾದ ಕಪಾಳಕ್ಕೆ ಢಾಳಾಗಿ ಅರಿಸಿನ ಹಚ್ಚಲಾಗಿತ್ತು. ಮೂಗಿಗೆ ಮುತ್ತು ಜೋಡಿಸಿದ ಹೊಳೆಯುವ ನತ್ತು ಹಾಕಿದ್ದರು.

ಕಿವಿಯಲ್ಲಿ ಬೆಂಡೋಲೆಯ ಜೊತೆಗೆ ಸಣ್ಣ ಗಂಟೆಯಾಕಾರದ ಓಲೆಗಳಿದ್ದವು. ಜಡೆಯಂತೂ ಬಳಕುವ ಅವನ ಸೊಂಟ ದಾಟಿ ಕೆಳಗೆ ಚಾಚಿಕೊಂಡಿತ್ತು. ರಾಘ್ಯಾನ ತಲೆಗೂದಲು ಮೊದಲಿನಿಂದಲೂ ಚೂರು ಉದ್ದವೇ! ಅವನ ಉದ್ದ ಕೂದಲು ನೋಡಿದವರೆಲ್ಲ ರಾಘುವನ್ನ ನಿಲ್ಲಿಸಿ, ''ಏನ್ ನಾಟಗ ಕಟ್ಟಿದ್ದೇನಲೇ ಅಳಿದೇವ್ರು ಕೂದ್ಲ ಹಿಂಗ್ ಬಿಟ್ಟಿದ್ದಿ, ಹಂಗಿದ್ರೆ ಹೇಳು ಬಂಗಾರ ತರತೀವಿ'' ಅಂತ ಗಮಾತು ಮಾಡುತ್ತಿದ್ದರು. ಇವರಾರ ಮಾತಿಗೆ ತಲೆ ಕೆಡಿಸಿಕೊಳ್ಳದ ರಾಘು ಆ ಕೂದಲಿಗೆ ಒಂದು ರಬ್ಬರ್ ಹಾಕಿ ಹಿಂದೆ ಇಳೀಬಿಟ್ಟು ಮುಂದೆ ಹಣ್ಣೆತ್ತಿ ಮೇಲೆ ಸಾಲಿಗೋಗ ಹುಡುಗ್ರು ಹಾಕುವಂತಹ ಹೇರ್‌ಬ್ಯಾಂಡನ್ನು ಒತ್ತಿ ಕೂಡಿಸಿಕೊಳ್ಳುತ್ತಿದ್ದ.

ಆದರಿವತ್ತು ಆ ಕೂದಲಿಗೆ ಚೌರಿ ಸೇರಿಸಿ ಹುಡ್ಗೀರು ಆಸೆ ಪಡಬೇಕು ಅಂತಹ ಉದ್ದನ ಜಡೆ ಹೆಣೆದಿದ್ದರು. ಮೆರವಣಿಗೆಯ ಮಧ್ಯೆ ವಯ್ಯಾರದಿಂದ ಕುಂಡಿ ಕುಣಿಸುತ್ತ ರಾಘ್ಯ ನಿಧಾನ ಹೆಜ್ಜೆ ಇಡುತ್ತಿದ್ದರೆ, ಜಡೆ ಆ ಕಡೆ ಈ ಕಡೆ ವಾಲುತ್ತಿತ್ತು. ಅದೆಲ್ಲಿಂದಲೋ ಬಂದ ಜೋಗಮ್ಮನವರು ಇಡೀ ಮೆರವಣಿಗೆಯನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡಿದ್ದರು.

ಪ್ರತಿಯೊಂದೂ ಅವರು ಹೇಳಿದಂತೆಯೇ ನಡೆಯುತ್ತಿತ್ತು. ಮೂರ ಮುಂಜಾಲೆ ಮೂರು ರಸ್ತೆ ಕೂಡುವ ಆ ಊರ ಬಸ್ ಸ್ಟ್ಯಾಂಡ್ ಎಂದು ಕರೆಯುವ ಉಟಗನೂರು ತಾತನ ಗದ್ದುಗೆಯ ಮುಂದೆ ಬಸ್ಸಿನಿಂದ ಐದಾರು ಜನ ಗಂಡು ಜೋಗಮ್ಮನವರು ಇಳಿದಾಗಲೇ ಊರಲ್ಲಿ ಗುಸು ಗುಸು ಪ್ರಾರಂಭವಾಗಿತ್ತು. ಅವರೊಂದಿಗೆ ಯಾವಾಗ ರಾಘು ಕಾಣಿಸಿಕೊಂಡನೋ ಎಲ್ಲರಿಗೂ ನಿಕ್ಕಿಯಾಗಿ ಹೋಯಿತು. ಅವರೆಲ್ಲ ರಾಘುವಿನ ಮನೆಯಂಗಳ ತುಳಿದಾಗ ಮಲ್ಲವ್ವ ಹಡ್ಲಿಗಿ ತುಂಬೋಟು ಅಕ್ಕಿ ಹಾಕಿ, ಮ್ಯಾಲ ನೂರ ಒಂದು ರೂಪಾಯಿ ರೊಕ್ಕ ಇಟ್ಟು ಉದೋss ಅಂತ ಉದ್ಗಾರ ತೆಗೆದು, ''ಹೆಂಗಾರ ಮಾಡಿ ನಮ್ಮನೀ ಕೊನೀ ಕೂಸ್ನ ಮನ್ಯಾಗ ಹೊಂದಿಸವ್ವೋ ಯಲ್ಲವ್ವ ನೀ ಜಗತ್ತಿಗೆಲ್ಲ ದೊಡ್ಡಾಕಿದ್ದೀ'' ಅಂತ ಕಣ್ಣೀರು ತೆಗೆದಿದ್ದಳು. ಆದರೆ, ಅವರ್‍ಯಾರೂ ಮಲ್ಲವ್ವನ ಮಾತು ಕೇಳಲಿಲ್ಲ.

ನೋಡಿದರೆ ಕಣ್ಣು ಕುಕ್ಕಬೇಕು, ಹಂಗಿದ್ದರು ಮುತ್ತು ಕಟ್ಟಿಸಲು ಅಷ್ಟು ದೂರದಿಂದ ಬಂದ ಜೋಗತಿಯರು. ಅವರ ನಡಿಗೆಯೇನು? ನೋಟವೇನು? ನಡೆದರೆ ಬಳಕುವ ಅವರ ವಯ್ಯಾರವೇನು? ನೋಡಿದವರೆಲ್ಲ ಬೆರಗಾಗಿದ್ದರು. ತಲೆಯ ಮ್ಯಾಲೊಂದು ಸಿಂಬೆ ಸುತ್ತಿ, ಅದರ ಮೇಲೆ ಯಲ್ಲಮ್ಮನ ಮುಖ ಇಟ್ಟ ಬಿಂದಿಗೆ ಹೊತ್ತು ಹಲಗೆಯ ಲಯಕ್ಕೆ ತಕ್ಕಂತೆ ಕುಣಿಯುತ್ತಿದ್ದರು.

ಒಂದಿಬ್ಬರು ಹಿರಿಯ ವಯಸ್ಸಾದ ಜೋಗತಿಯರು ರಾಘುವಿನ ಆಸುಪಾಸು ನಡೆಯುತ್ತ, ''ಮೆಲ್ಲಗ ನಡೀಯವ್ವ ಹಸೀಮಯ್ಯೀ ಏಸು ಮಂದಿ ಬಾಡ್ಯಾರ ಕಣ್ಣ ಹತ್ಯಾವೇನೂ!?'' ಅಂತ ಕಾಳಜಿ ಮಾಡುತ್ತಿದ್ದರು. ಮಿಂಚುವ ಸೀರೆಗಳನ್ನ ಉಟ್ಟಿದ್ದ ಜೋಗತಿಯರು ಮೈಮೇಲೆ ಬೋರಮಳ, ಟಿಕ್ಕಿ, ಕೆಲವರು ಆಧುನಿಕ ಅಲ್ಟ್ರೇಶನ್ ನೆಕ್‌ಲೆಸ್ ಸರಗಳನ್ನು ಧರಿಸಿದ್ದರು. ಒಂದ್ಕಡೆ ಮೂರು ನಾಕು ಜನ ಜೋಡಾಗಿ ಕುಣಿಯುತ್ತಿದ್ದರು.

ಕಣಿ ಹಲಗೆಯ ಹುಲಗಪ್ಪ ಅವರ ಮೈಯೆಲ್ಲ ನೀರು ಹರಿವಂತೆ ಎಗರೆಗರಿ ಬಾರಿಸಿ ಕುಣಿಸಿ ತಾನೂ ಬೆವರುತ್ತಿದ್ದ. ಬರೀ ಮೊಹರಂ ಬಿಟ್ಟರೆ ಯಾರಾದರೂ ಸತ್ತರೆ ಮಾತ್ರ ಹಲಗೆ ಹೆಗಲಿಗೇರಿಸುತ್ತಿದ್ದ ಹುಲಗಪ್ಪ ಮೊದಲ ಸಲ ಯಾವುದೋ ಕಲ್ಯಾಣ ಕಾರ್ಯದ ಭಾಗವಾಗಿದ್ದೇನೆ ಎಂಬ ಗುಂಗಿನಲ್ಲಿದ್ದ!

ರಾಘ್ಯಾನ ಅಣ್ಣ ಅವನ ತಲೆಯ ಮೇಲೆ ಹೊಸದೊಂದು ದೇವರಿಗೆ ಹಿಡಿಯುವಂತಹ ಬಣ್ಣದ ಬಟ್ಟೆಯ ಛತ್ರಿಕಿ ಹಿಡಿದಿದ್ದ. ರಾಘ್ಯಾನ ಸಣ್ಣ ತಂಗಿ ಶ್ರೀದೇವಿ ಕಳಸ ಹಿಡಿದಿದ್ದಳು. ಅವರ ಮೊಗದಲ್ಲಿ ದುಃಖವಾಗಲಿ, ಹೇಳಿಕೊಳ್ಳುವಂತಹ ಸಂತಸವಾಗಲಿ ಕಾಣಲಿಲ್ಲ! ಸಣ್ಣ ವಯಸ್ಸಿಗೆ ಸೋದರ